
**ಆಕೆ:** ಸರ್ ನಾನಿನ್ನು ಕೌಂಟರ್‌ನಲ್ಲಿ ಕೆಲಸ ಮಾಡುವುದಿಲ್ಲ.
**ಮಾಲೀಕ:** ಯಾಕಮ್ಮಾ, ಏನಾಯ್ತು?
**ಆಕೆ:** ಏಕೋ ಏನೋ ನನ್ನ ಸೌಂದರ್ಯ ಕಡಿಮೆ ಆಗಿದೆ ಅನಿಸುತ್ತಿದೆ ಸರ್. ಈಗ ಪುರುಷರು ನಾನು ಕೊಟ್ಟ ಹಣವನ್ನು ಎಣಿಸಿಕೊಳ್ಳುವುದಕ್ಕೆ ಶುರು ಮಾಡಿದ್ದಾರೆ.

**ಪತಿ:** ಸ್ಮಿತಾ ಯಾಕೋ ಏನೋ, ನನ್ನ ಕಣ್ಣು ಮೊದಲಿನಂತೆ ಸರಿಯಾಗಿಲ್ಲ ಅನಿಸುತ್ತೆ ಕಣೆ.
**ಸ್ಮಿತಾ:** ಅಂಥದ್ದೇನಾಯ್ತು ನಿಮ್ಮ ಕಣ್ಣಿಗೆ?
**ಪತಿ:** ಯಾಕೋ ಇತ್ತೀಚೆಗೆ ನೀನು ಸುಂದರವಾಗಿ ಕಾಣ್ತಾ ಇದ್ದೀಯ. ಅದಕ್ಕೆ ಹಾಗನಿಸ್ತು.

**ಪತ್ನಿ:** ರೀ, ನೀವು ತುಂಬಾ ಒಳ್ಳೆಯವರು ಕಣ್ರೀ.
**ಪತಿ:** ನನಗೆ ನಿನ್ನ ಹಾಗೆ ಹೇಳೋದಕ್ಕೆ ಯಾವ ಮಾತು ಬರುತ್ತಿಲ್ಲವೇ?
**ಪತ್ನಿ:** ಅದೇನು ಮಹಾ, ನನ್ನ ಹಾಗೆ ಏನಾದರೂ ಸುಮ್ಮನೆ ಹೇಳಿ.

**ಮೂರ್ತಿ:** ಕೇಶವ ನಿನ್ನ ಹೆಂಡತಿ ಸೂಟ್‌ಕೇಸ್ ತೆಗೆದುಕೊಂಡು ತವರಿಗೆ ಹೋಗಿರುವುದನ್ನು ಬಹಳ ಬೇಸರದಿಂದ ಹೇಳ್ತಾ ಇದ್ದೀಯಲ್ಲ, ಏಕೆ?
**ಕೇಶವ:** ಏನು ಹೇಳಲಿ, ಆ ಸೂಟ್‌ಕೇಸಲ್ಲಿ ನನ್ನ ಗರ್ಲ್ ಫ್ರೆಂಡ್ಸ್ ಫೋಟೊ ಇತ್ತು ಕಣಯ್ಯಾ.



ಯುದ್ಧದಲ್ಲಿ ಪಾಕಿಸ್ತಾನ ಬೆಂಬಲಿಸಿದ "ಟರ್ಕಿ" ದೇಶ

**ಹರೀಶ:** ನಿನ್ನ ಎಡ ತೊಡೆಯ ಮೇಲೆ ಯಃಕಶ್ಚಿತ್ ಆ ತರುಣಿಯನ್ನು ಕೂರಿಸಿದ್ದರಿಂದ ಮೂಳೆ ಮುರಿಯಿತೆಂದರೆ ನಂಬಲಸಾಧ್ಯ.
**ಗೋಪಿ:** ಹಾಗಲ್ಲ, ಅವಳು ಹಾಗೆ ಕೂತಿದ್ದಾಗ ನನ್ನ ಹೆಂಡತಿ ನೋಡಿಬಿಟ್ಟಳು.

**ನವ್ಯ ಕವಿ:** ಯಮುನಾ, ನೀನೇ ನನ್ನ ಪಾಲಿಗೆ ಕವಿತಾ, ಕಲ್ಪನಾ, ಭಾವನಾ ಎಲ್ಲ.
**ಯಮುನಾ:** ನೀವೂ ಅಷ್ಟೇ. ನನ್ನ ಪಾಲಿನ ಗೋಪಿ, ಮುರಳಿ, ಮಾಧವ, ಕೇಶವ ಎಲ್ಲ ನೀವೇ.

**ಪ್ರಿಯಕರ:** ಪ್ರಿಯೆ ನಿನಗೆ ನನ್ನ ಹೃದಯದಲ್ಲಿ ಅರಮನೆ ಕಟ್ಟಿ, ರಾಣಿಯಾಗಿ ನೋಡಿಕೊಳ್ಳುತ್ತೇನೆ.
**ಪ್ರೇಯಸಿ:** ಈ ಕನಸನ್ನು ಆಮೇಲೆ ಕಾಣುವಿರಂತೆ, ಈಗ ಮೊದಲು ಒಂದು ಮನೆ ಕಟ್ಟಿ.

**ಪತ್ನಿ:** ರೀ, ನೀವು ಮೊದಲಿನಂತೆ ಇಲ್ಲ.
**ಪತಿ:** ಏನಾಯ್ತು?
**ಪತ್ನಿ:** ಇನ್ನೇನು ಮತ್ತೆ, ನಾನು ಮುನಿಸಿಕೊಂಡು ತವರಿಗೆ ಹೋಗುತ್ತೇನೆ ಅಂದರೂ ನೀವು ನನ್ನನ್ನು ತಡೆಯೋದೇ ಇಲ್ಲ.
**ಪತಿ:** ನೀನು ಹೋಗುವುದರಿಂದ ಅದೃಷ್ಟ ಒಳಬರುತ್ತೆ ಅನ್ನೋದಾದ್ರೆ ಅದನ್ನು ನಾನು ತಡೆಯೋಕೆ ಆಗುತ್ತಾ?

**ಪತ್ನಿ:** ರೀ, ಕಾರನ್ನು ನಿಧಾನವಾಗಿ ಓಡಿಸಿ.
**ಪತಿ:** ಏಕೆ? ಜೋರಾಗಿ ಓಡಿಸಿದರೆ ಏನಾಗುತ್ತೆ?
**ಪತ್ನಿ:** ರೀ, ನೀವು ಇನ್ನೂ ಇನ್‌ಶ್ಯುರೆನ್ಸ್ ಮಾಡಿಸಿಲ್ಲವಲ್ಲ ಅದಕ್ಕೆ.

**ರಘು:** ಅಶೋಕ ನೀನು ಬರೆದ 'ಹೌ ಟು ಚೇಂಜ್ ಯುವರ್ ಲೈಫ್' ಪುಸ್ತಕ ಲಕ್ಷಾಂತರ ಪ್ರತಿಗಳು ಮಾರಾಟವಾದವು ಅಂತ ಹೇಳಿದೆಯಲ್ಲ. ಹೇಗೆ ಸಾಧ್ಯವಾಯಿತು?
**ಅಶೋಕ:** ಪುಸ್ತಕದ ಶೀರ್ಷಿಕೆಯಲ್ಲಿ 'ಹೌ ಟು ಚೇಂಜ್ ಯುವರ್ ವೈಫ್' ಎಂದು ತಪ್ಪಾಗಿ ಮುದ್ರಿತವಾಗಿ ಬಿಟ್ಟಿತ್ತು ಅಷ್ಟೆ.

**ಬ್ಯಾಂಕ್ ಮ್ಯಾನೇಜರ್:** ರೀ ಇವರೇ, ನಿಮ್ಮ ಹೆಂಡತಿ ತವರಿಗೆ ಹೋದ್ರಾ?
**ಆತ:** ಹೌದು, ಇದು ನಿಮಗೆ ಹೇಗೆ ಗೊತ್ತಾಯ್ತು?
**ಬ್ಯಾಂಕ್ ಮ್ಯಾನೇಜರ್:** ಈಗೀಗ ನಿಮ್ಮ ಖಾತೆಯಲ್ಲಿ ಹೆಚ್ಚು ಹೆಚ್ಚು ಹಣ ಉಳೀತಾ ಇದೆಯಲ್ಲ.

**ಅಧಿಕಾರಿ:** ಏಕೆ ನನ್ನನ್ನು ಗಿಣಿಶಾಸ್ತ್ರ ಕೇಳಿ ಅಂತಿದ್ದಿಯಲ್ಲ?
**ಪತ್ನಿ:** ಹೌದು ಕಣ್ರೀ ನಿಮ್ಮ ಹಾಗೆ ಭ್ರಷ್ಟಾಚಾರದ ಹಗರಣದಲ್ಲಿ ಸಿಕ್ಕಿಕೊಂಡಿದ್ದ ಅಧಿಕಾರಿಯೊಬ್ಬರು ಗಿಣಿ ಶಾಸ್ತ್ರ ಕೇಳಿದ ಮೇಲೆ ಹಗರಣದಿಂದ ಮುಕ್ತಗೊಂಡರಂತೆ.

**ಮಹೇಶ:** ನಾಣಿ ನಾನು ನಿನ್ನೆ ಹೇಳಿದ್ದ ಜೋಕಿಗೆ ಇವತ್ತು ನಗ್ತಾ ಇದ್ದೀಯಲ್ಲ?
**ನಾಣಿ:** ಹೌದು, ಅದು ನಿನ್ನೆ ನನಗೆ ಅರ್ಥವಾಗಿರಲಿಲ್ಲ.

**ನಾಗಾರ್ಜುನ:** ಶಿವು ನನ್ನ ಗೆಳೆಯ ಹತ್ತು ದಿನಗಳಲ್ಲಿ ಸಿನಿಮಾ ನಿರ್ಮಿಸಿ, ಎರಡು ದಾಖಲೆಗಳನ್ನು ನಿರ್ಮಿಸಿದ್ದಾನೆ.
**ಶಿವು:** ಎರಡು ದಾಖಲೆ ಹೇಗಾದವು?
**ನಾಗಾರ್ಜುನ:** ಒಂದು, 10 ದಿನಗಳಲ್ಲಿ ಸಿನಿಮಾ ನಿರ್ಮಿಸಿದ್ದು. ಮತ್ತೊಂದು ಒಂದು ಥಿಯೇಟರ್‌ನಲ್ಲಿ ಒಂದೇ ಒಂದು ಪ್ರದರ್ಶನ ನಡೆದದ್ದು.

ಸಂಗ್ರಹ: **ಶಂಕರೇಗೌಡ ತುಂಬಕೆರೆ, ಮಂಡ್ಯ**